ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY DEBATES

ಮಂಗಳವಾರ 19ನೇ ಆಗಸ್ಟ್ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆ ಸಭಾಂಗಣದಲ್ಲಿ

ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (**ಶ್ರೀ ರಮೇಶ್ ಕುಮಾರ್**) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮಾಗಡಿಯಲ್ಲಿ ಅಗ್ನಿಶಾಮಕ ಠಾಣೆ

451 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಕಾರಾಗೃಹ, ಸೈನಿಕ ಕಲ್ಯಾಣ, ಗೃಹರಕ್ಷಕ ದಳ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಾಗಡಿ ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯುವ ಪ್ರಸ್ತಾಪವು ಸರ್ಕಾರದವರ ಪರಿಶೀಲನೆಯಲ್ಲಿದೆಯೇ?*

ಆ) *ಅಗ್ನಿಶಾಮಕ ಠಾಣೆಯನ್ನು ತೆರೆಯಲು ಅವಶ್ಯಕವಾದ ಭೂಮಿಯನ್ನು ಪುರಸಭೆಯ ವತಿಯಿಂದ ಇಲಾಖೆಗೆ ನೀಡಿದ್ದರೂ ಕೂಡ ಈವರೆಗೆ ಠಾಣೆಯನ್ನು ತೆರೆಯದಿರಲು ಕಾರಣವೇನು?*

ಇ) *ಮಾಗಡಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ಯಾವಾಗ ಆರಂಭಿಸಲಾಗುವುದು?*

ಶ್ರೀ ವಿ. ಸೋಮಣ್ಣ (ಕಾರಾಗೃಹ, ಸೈನಿಕ ಕಲ್ಯಾಣ, ಗೃಹರಕ್ಷಕ ದಳ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು) :

ಅ) ಮಾಗಡಿ ಪಟ್ಟಣದಲ್ಲಿ ಒಂದು ಅಗ್ನಿಶಾಮಕ ಠಾಣೆ ಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 53 ಕಆಸೇ 93 ದಿನಾಂಕ : 22.12.1993ರಲ್ಲಿ ಮಂಜೂರಾತಿ ನೀಡಲಾಗಿದೆ.

ಆ) ಮಾಗಡಿ ಪಟ್ಟಣದಲ್ಲಿ ಪುರಸಭೆಯವರು ಅಗ್ನಿಶಾಮಕ ಠಾಣೆ ಕಟ್ಟಡ ಕಟ್ಟಲು ಸೂಕ್ತ ನಿವೇಶನವನ್ನು ನೀಡಿರುವುದಿಲ್ಲ.

ಇ) ಮಾಗಡಿ ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಅಗ್ನಿಶಾಮಕ ಠಾಣೆಯನ್ನು ಮಾಗಡಿಯಲ್ಲಿ ಪ್ರಾರಂಭ ಮಾಡುವುದಕ್ಕೆ ಸರಕಾರ ಪರಿಶೀಲನೆ ಮಾಡಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ "ಹೌದು" ಎಂದು ಉತ್ತರ ಕೊಟ್ಟಿದ್ದಾರೆ ಸರಕಾರದ ಆದೇಶದ ನಂಬರ್ ಅನ್ನೂ ಕೂಡ ಇಲ್ಲಿ ಕೊಟ್ಟಿದ್ದಾರೆ. ಇನ್ನೊಂದು ಪ್ರಶ್ನೆಯಲ್ಲಿ ನೀವು ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಹೇಳಿದರೆ ಪ್ರಾರಂಭಿಸುವ ಪ್ರಸ್ತಾವನೆ ಸರಕಾರದ ಹಂತದಲ್ಲಿ ಪರಿಶೀಲನೆಯಲ್ಲಿ ಇದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಸಚಿವರು ಕ್ಲಾರಿಫೈ ಮಾಡಬೇಕು. ಪುರಸಭೆಯವರು ನಮಗೆ ಜಾಗವನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಈಗಾಗಲೇ ಪುರಸಭೆಯವರು ರೆಸಲ್ಯೂಷನ್ ಮಾಡಿ 2 ಎಕರೆ ಜಾಗವನ್ನು ತೆಗೆದುಕೊಳ್ಳಿ ಎಂದು ಬರೆದಿದ್ದಾರೆ. ಇದರ ಬಗ್ಗೆ ನನಗೆ ಪುರಸಭೆಯವರಿಂದ ಬಂದಿದೆ. ಒಂದು ವೇಳೆ ಅದು ಆಗಿಲ್ಲದೇ ಹೋದರೆ ಇನ್ನು ಒಂದು ತಿಂಗಳಲ್ಲಿ ಆ ಜಾಗವನ್ನು ನಾನು ಕೊಡಿಸುತ್ತೇನೆ ಅದನ್ನು ತಕ್ಷಣ ಪ್ರಾರಂಭ ಮಾಡುತ್ತೀರಾ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಅಧ್ಯಕ್ಷರು : ಜಾಗ ಕೊಡಿಸಿದರೆ ಮಾಡಲಿಕ್ಕೆ ಕಷ್ಟವೇನು?

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, 1993ರಲ್ಲಿ ನಾವು ಮಾಗಡಿ ತಾಲ್ಲೂಕಿನಲ್ಲಿ ಒಂದು ಅಗ್ನಿಶಾಮಕ ಠಾಣೆ ಮಾಡಬೇಕೆಂದು ಮಂಜೂರಾತಿ ದೊರಕಿದೆ. 4.10.95ರಲ್ಲಿ ಮಾಗಡಿ ಪುರಸಭೆಯವರಿಗೆ ಪತ್ರ ಬರೆದಿದ್ದೇವೆ ಅವರಿಂದ ಉತ್ತರ ಬಂದಿಲ್ಲ. ಮತ್ತೆ8.7.96ರಲ್ಲಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಸರಕಾರದ ಜಮೀನು ಇದ್ದರೆ ಕೊಡಿ ಎಂದು ಕೇಳಿದ್ದೇವೆ. ಅವರು ಸರಕಾರದ ಜಮೀನು ಯಾವುದೂ ಇಲ್ಲವೆಂದು ಹೇಳಿದ ಮೇಲೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅವರಿಗೆ ಮನವಿ ಮಾಡಿದ ಮೇಲೆ ಅವರು ಅರ್ಧ ಎಕರೆ ಜಮೀನನ್ನು ನಾವು ಕೊಡುತ್ತೇವೆ 2 ಲಕ್ಷದ 2050 ರೂಪಾಯಿಯನ್ನು ನೀವು ಕಟ್ಟಿ ಎಂಬ ಪ್ರಸ್ತಾವನೆ ಕಳುಹಿಸಿದರು. ಅದು ನಮ್ಮ ಮುಂದಿದೆ. ಅರ್ಧ ಎಕರೆಯಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅರ್ಧ ಎಕರೆಯಲ್ಲಿ ಮಾಡುವುದಕ್ಕೆ ಆದರೆ ಮಾಡುತ್ತೇವೆ. ಇಲ್ಲವಾದಲ್ಲಿ ತಮ್ಮ ಮುಖೇನ.....

ಅಧ್ಯಕ್ಷರು : ಒಂದು ತಿಂಗಳಲ್ಲಿ ನಾನು ಜಾಗ ಕೊಡಿಸುತ್ತೇನೆಂದು ಮಾನ್ಯ 'ಸದಸ್ಯರು ಹೇಳುತ್ತಿದ್ದಾರೆ. ನೀವು ಜಾಗ ಕೊಡಿಸಿ....

ಶ್ರೀ ವಿ. ಸೋಮಣ್ಣ : ಅವರು ಜಾಗ ಕೊಡಿಸುತ್ತೇವೆಂದು ಹೇಳುತ್ತಲೇ ಇದ್ದಾರೆ. ನಾನು ಅವರಿಗೆ ಹೇಳುತ್ತಿದ್ದೇನೆ. ಅವರು ನಾಳೆ ಬೆಳಿಗ್ಗೆ ಜಾಗ ಕೊಟ್ಟರೆ ತಕ್ಷಣ ಶುರು ಮಾಡಿಸುತ್ತೇನೆ.

ಬೆಂಗಳೂರು ನಗರ ಪಾಲಿಕೆಯವರು ಕಸವನ್ನು ಸಾಗಿಸುವ ವಿಚಾರ

454 - ಶ್ರೀ ಪ್ರಕಾಶ್ ಪಿ. ಎಸ್. (ಚಿಕ್ಕಪೇಟೆ) : ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಪಾಲಿಕೆಯವರು ಕಸವನ್ನು ಎಷ್ಟು ದಿನಗಳಿಗೊಮ್ಮೆ ಲಾರಿಗಳ ಮೂಲಕ ಸಾಗಿಸುತ್ತಾರೆ?